### ■ ಗಾಂಧಿವಾದಿ ಡಾ.ಗುರುದಾಸ್ ನಿಧನ



**ಬೆಂಗಳೂರು:** ಹಿರಿಯ ಗಾಂಧಿವಾದಿ ಹಾಗೂ ಸ್ವಾತಂತ್ರ್ಯ ಹೋರಾಟಗಾರ ಡಾ. ಎಂ.ಗುರುದಾಸ್ ಶುಕ್ರವಾರ ನಿಧನ ಹೊಂದಿದರು. ಅವರಿಗೆ 96 ವರ್ಷಗಳಾಗಿದ್ದು, ಪತ್ನಿ, ಮಕ್ಕಳು, ಇಬ್ಬರು ತಂಗಿಯರನ್ನು ಅಗಲಿದ್ದಾರೆ. ಗುರುದಾಸ್ ತಮ್ಮ ಜೀವಿತ ಅವಧಿಯಲ್ಲಿ ಸಾಮಾಜಿಕ ಸೇವೆ, ಸ್ವಾತಂತ್ರ್ಯ ಹೋರಾಟ ಸೇರಿದಂತೆ ಇತರೆ ಸೇವಾ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅಲ್ಲದೆ ಅವರು ಬ್ರಹ್ಮ ಸಮಾಜದ ಮುಖಂಡ ಕೂಡ ಆಗಿದ್ದರು. ಬೆಂಗಳೂರು ಬ್ರಹ್ಮ ಸಮಾಜದ, ಬ್ರಹ್ಮ ಸಮಾಜ ಟ್ರಸ್ಟ್‌ನ ಅಪ್ಪಾವು ಪಿಳ್ಳೈ ಶಿಕ್ಷಣ ಸಂಸ್ಥೆಯ ಮಾಜಿ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಬ್ರಹ್ಮೋ ಕುಟುಂಬದಲ್ಲಿ 1915ರಲ್ಲಿ ಜನಿಸಿದ್ದ ಗುರುದಾಸ್ ಅವರ ತಂದೆ ಕದರಪ್ಪ. ಗುರುದಾಸ್ ಬೆಂಗಳೂರಿನ ಬ್ರಹ್ಮ ಸಮಾಜದ ಸಂಸ್ಥಾಪಕರೂ ಆಗಿದ್ದರು.

!
ಪುಟ ಪುಟವೂ ಅಚ್ಚರಿ!!
e-paper
www.hosadigantha.in/epaper
e-mail
hosadi@gmail.com
digantha@yahoo.com




ಸಮಾರೋಪ....

**ಚನ್ನೇನಹಳ್ಳಿಯ ಜನಸೇವಾ ವಿದ್ಯಾ ಕೇಂದ್ರದಲ್ಲಿ ನಡೆದ ಆರೆಸ್ಸೆಸ್‌ನ ಪ್ರಥಮ ವರ್ಷದ ಸಂಘ ಶಿಕ್ಷಾ ವರ್ಗ ಸಮಾರೋಪ ಸಮಾರಂಭದಲ್ಲಿ ಉದ್ಯಮಿ ಪಾರಸ್ ಜೈನ್ ಮಾತನಾಡಿದರು.**

### ■ ಅಂತರ್ ಧರ್ಮೀಯ ವಿವಾಹ

**ಮದ್ದೂರು:** ತಾಲೂಕು ಬೆಸಗರಹಳ್ಳಿ ಗ್ರಾಪಂ ಏರ್ಪಡಿಸಿದ್ದ ಬಸವಜಯಂತಿ ಸಮಾರಂಭದಲ್ಲಿ ಅಂತರ್‌ಧರ್ಮಿಯ ವಿವಾಹ ಮಾಡಿಕೊಂಡ ಮೇರಿ, ಕುಮಾರ್ ಅವರನ್ನು ಅಭಿನಂದಿಸುವ ಮೂಲಕ ವಿಶೇಷವಾಗಿ ಆಚರಿಸಲಾಯಿತು. ಗ್ರಾಪಂ ಅಧ್ಯಕ್ಷೆ ಇಂದಿರಾ ಪುಟ್ಟಸ್ವಾಮಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಬಸವಣ್ಣನವರ ಅಂತರ್‌ಜಾತಿ ವಿವಾಹ ಪರಿಕಲ್ಪನೆ ಇಂದಿಗೂ ಸಾಕಾರಗೊಳ್ಳುತ್ತಿದೆ. ಹೀಗಾಗಿ ಇಂದು ಅಂತರ್‌ಧರ್ಮಿಯ ವಿವಾಹ ಮಾಡಿಕೊಂಡ ದಂಪತಿಯನ್ನು ಸನ್ಮಾನಿಸುತ್ತಿದ್ದೇವೆ ಎಂದರು. ಉಪಾಧ್ಯಕ್ಷ ಪುಟ್ಟಸ್ವಾಮಿ, ಸದಸ್ಯರಾದ ನಾಗರಾಜು, ನಾಗರಾಜು, ಪುಟ್ಟಸ್ವಾಮಿ, ಎಂ.ಬಿ.ನಾಗರಾಜು, ಕಾರ್ಯದರ್ಶಿ ಕಾಂತಮಣಿ ಸೇರಿದಂತೆ ಹಲವರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಆರೆಸ್ಸೆಸ್ ಪ್ರಥಮ ವರ್ಷ ಸಂಘ ಶಿಕ್ಷಾ ವರ್ಗದ ಸಮಾರೋಪ

# ವ್ಯಕ್ತಿ ಪರಿವರ್ತನೆಯಲ್ಲಿ ಸಂಘ ನಿರತ

**ಬೆಂಗಳೂರು:** ವ್ಯಕ್ತಿಯನ್ನು ಶಕ್ತಿಯಾಗಿ ಪರಿವರ್ತಿಸುವ ಕೆಲಸವನ್ನು ರಾಷ್ಟ್ರೀಯ ಸ್ವಯಂಸೇವಕ ಸಂಘ ಮಾಡುತ್ತಿದೆ ಎಂದು ಉದ್ಯಮಿ ಪಾರಸ್ ಜೈನ್ ಹೇಳಿದರು.

ಬೆಂಗಳೂರು ಸಮೀಪದ ಚನ್ನೇನಹಳ್ಳಿಯ ಜನಸೇವಾ ವಿದ್ಯಾ ಕೇಂದ್ರದಲ್ಲಿ ನಡೆದ ಆರೆಸ್ಸೆಸ್‌ನ ಪ್ರಥಮ ವರ್ಷದ ಸಂಘ ಶಿಕ್ಷಾ ವರ್ಗ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸಂಘದ ಈ ಕೆಲಸ ಹೊರಗಿನವರಿಗೆ ಸರಿಯಾಗಿ ತಿಳಿಯುತ್ತಿಲ್ಲ ಎಂದು ವಿಷಾದಿಸಿದ ಅವರು, ವ್ಯಕ್ತಿ ನಿರ್ಮಾಣದ ಕೆಲಸ ಭಾರತದಲ್ಲಿ ಮಾತ್ರ ಈ ಪ್ರಮಾಣದಲ್ಲಿ ನಡೆಯುತ್ತಿದೆ ಎಂದರು.

ಇಂದು ನಮ್ಮ ದೇಶದ ಮೇಲೆ ಹಲವು ಸವಾಲುಗಳು ಎರಗುತ್ತಿವೆ. ಹಲವಾರು ವಿದೇಶೀ ಕಂಪನಿಗಳು ಇಲ್ಲಿ ಬೀಡು ಬಿಡುತ್ತಿವೆ. ಅದರಿಂದ ಹಲವು ಬದಲಾವಣೆಗಳು ಮುಂದಿನ ದಿನಗಳಲ್ಲಿ ಅಪಾಯಕಾರಿಯಾಗಿ ಸಂಭವಿಸುತ್ತವೆ. ಅವುಗಳಿಂದ ದೇಶವನ್ನು ರಕ್ಷಿಸಲು ಶಕ್ತಿ ಬೇಕಾಗಿದೆ ಎಂದು ಹೇಳಿದರು.

ಇಂದಿನ ಯುವ ಜನತೆ ಗುರಿ ಇಲ್ಲದವರಾಗಿದ್ದಾರೆ. ಅವರಿಗೆ ಬೇಕಾದ ಗುರಿ ಮುಟ್ಟಲು ಬೇಕಾದ ಶಿಕ್ಷಣ ಇಂದು ಬೇಕಾಗಿದೆ. ಅದನ್ನು ಆರೆಸ್ಸೆಸ್ ಮಾಡುತ್ತಿದೆ ಎಂದರು.

ಕುಟುಂಬ, ಸಮಾಜ, ದೇಶ ಪ್ರೇಮದ ಶಿಕ್ಷಣ ಪಡೆದ ಸ್ವಯಂಸೇವಕರು ಎಲ್ಲೆಡೆ ಸ್ಥಾನ ಪಡೆದರೆ ಎಲ್ಲ ಭೇದ ಭಾವಗಳು, ಅಪಾಯಗಳು ದೂರಾಗುವುದು ಖಂಡಿತ ಎಂದು ಭರವಸೆಯಿಂದ ನುಡಿದರು.

ಸಮಾರೋಪ ಸಮಾರಂಭದಲ್ಲಿ ಪ್ರಧಾನ ಭಾಷಣ ಮಾಡಿದ ಸಂಘದ ಕರ್ನಾಟಕ ದಕ್ಷಿಣ ಪ್ರಾಂತದ ಸಹಸಂಪರ್ಕ ಪ್ರಮುಖರಾದ ಪಟ್ಟಾಭಿರಾಮ್, ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ನಿರ್ಮಾಣದ ಕಾರ್ಯವನ್ನು ಸಂಘ ಕೈಗೆತ್ತಿಕೊಂಡಿದೆ. ಇಲ್ಲಿ ವ್ಯಕ್ತಿ ಸುಖದ ಕಲ್ಪನೆಯಿಲ್ಲ, ಬದಲಾಗಿ ರಾಷ್ಟ್ರ ಸುಖ – ವೈಭವದ ಸಾಧನೆಯೇ ಗುರಿ. ಅದಕ್ಕಾಗಿ ವ್ಯಕ್ತಿ ವ್ಯಕ್ತಿಗಳನ್ನು ಜೋಡಿಸಿ, ಸಂಸ್ಕಾರ ನೀಡಿ ಅವರ ಮೂಲಕ ಗುರಿಸಾಧನೆಯ ಕನಸನ್ನು ಸಂಘ ಕಂಡಿದೆ. ಅದಕ್ಕಾಗಿ ಶಿಕ್ಷಣ, ಸಂಸ್ಕಾರ, ತರಬೇತಿ ನೀಡುತ್ತಿದೆ ಎಂದರು. ಸಮಾರೋಪ ಸಮಾರಂಭದಲ್ಲಿ ಪ್ರಧಾನ ಭಾಷಣ ಮಾಡಿದ ಸಂಘದ ಕರ್ನಾಟಕ ದಕ್ಷಿಣ ಪ್ರಾಂತದ ಸಹ ಸಂಪರ್ಕ ಪ್ರಮುಖರಾದ ಪಟ್ಟಾಭಿರಾಮ್, ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ನಿರ್ಮಾಣದ ಕಾರ್ಯವನ್ನು ಸಂಘ ಕೈಗೆತ್ತಿಕೊಂಡಿದೆ. ಇಲ್ಲಿ ವ್ಯಕ್ತಿ ಸುಖದ ಕಲ್ಪನೆಯಿಲ್ಲ, ಬದಲಾಗಿ ರಾಷ್ಟ್ರ ಸುಖ- ವೈಭವದ ಸಾಧನೆಯೇ ಗುರಿ. ಅದಕ್ಕಾಗಿ ವ್ಯಕ್ತಿ ವ್ಯಕ್ತಿಗಳನ್ನು ಜೋಡಿಸಿ, ಸಂಸ್ಕಾರ ನೀಡಿ ಅವರ ಮೂಲಕ ಗುರಿಸಾಧನೆಯ ಕನಸನ್ನು ಸಂಘ ಕಂಡಿದೆ. ಅದಕ್ಕಾಗಿ ಶಿಕ್ಷಣ, ಸಂಸ್ಕಾರ, ತರಬೇತಿ ನೀಡುತ್ತಿದೆ ಎಂದರು.



ಸಂಘ ಕಾರ್ಯದ ಆಧಾರವೇ ಧರ್ಮ. ಧರ್ಮ ಇದ್ದಲ್ಲಿ ವ್ಯವಸ್ಥೆ ಚೆನ್ನಾಗಿರುತ್ತದೆ. ಆ ರೀತಿಯ ವ್ಯವಸ್ಥೆ ರೂಪಿಸುವುದೇ ನಮ್ಮ ಸಮಾಜ ಕಂಡುಕೊಂಡ ದಾರಿ. ವಸುಧೈವ ಕುಟುಂಬಕಂ ಎಂಬುದು ನಮ್ಮ ವಿಚಾರ. ಕೃಣ್ವಂತೊ ವಿಶ್ವಮಾರ್ಯಮ್ ಎನ್ನುವುದು ನಮ್ಮ ಕೆಲಸ, ಶಂ ನೋ ಅಸ್ತು ದ್ವಿಪದೇ ಶಂ ಚತುಷ್ಪದೇ ಎಂಬುದು ಅದರ ಆಧಾರ. ಅದನ್ನು ಮಾಡಲೆಂದೇ ವ್ಯಕ್ತಿತ್ವ ನಿರ್ಮಾಣ ಕಾರ್ಯವನ್ನು ಸಂಘ ಕೈಗೊಂಡಿದೆ. ಜಗತ್ತಿನಲ್ಲೇ ಹಿರಿದಾದ ವಿಚಾರಗಳು, ಅದರ ಅನುಷ್ಠಾನದ ಸಂಪತ್ತಿನ ಮೂಲಕ ಭಾರತ ಜಗತ್ತಿನ ತಾಯಿ ಎನಿಸಿತ್ತು. ಕಾಲದ ಹೊಡೆತದಿಂದ ಇದರ ಮರೆವು ಉಂಟಾಗಿ ದಾಸ್ಯದ ಸಂಕೋಲೆಗೆ ದೇಶ ಸಿಲುಕಿತು. ಇಲ್ಲಿನ ಸ್ವತ್ವ ನಾಶವಾಯಿತು ಎಂದು ದೇಶದ ಉನ್ನತಿ ಮತ್ತು ಅವನತಿಯ ಕಾರಣವನ್ನು ತಿಳಿಸಿದ ಅವರು, ಜನ್ಮಜಾತ ದೇಶಭಕ್ತ ಡಾ.ಹೆಡಗೇವಾರ್, ಈ ದೇಶಕ್ಕೆ ತಗುಲಿದ್ದ ರೋಗದ ಮೂಲ ಹುಡುಕಿದರು. ಹಿಂದುತ್ವದ ಮರೆವು, ಅದರ ಪರಿಣಾಮವಾಗಿ ಹುಟ್ಟಿದ ಒಡಕು, ಇದರಿಂದ ದೇಶಕ್ಕೆ ದಾಸ್ಯ ಮತ್ತು ಸತ್ವದ ನಾಶ ಎಂಬ ರೋಗವನ್ನು ಗುರುತಿಸಿದ ಅವರು ಅದಕ್ಕೆ ಔಷಧಿಯಾಗಿ ಸಂಘವನ್ನು ಆರಂಭಿಸಿದರು. ವ್ಯಕ್ತಿ ನಿರ್ಮಿತಿಯ ಮೂಲಕ ರಾಷ್ಟ್ರ ನಿರ್ಮಿತಿ, ಇದು ಸ್ಥಾಯಿ ಕಾರ್ಯ. ಇದರೊಡನೆ ಬರುವ ಸವಾಲುಗಳನ್ನು ಸಾಧನಗಳಾಗಿ ಮಾರ್ಪಡಿಸಿಕೊಂಡು ಎಲ್ಲರ ಸಹಕಾರದಿಂದ ರಾಷ್ಟ್ರ ನಿರ್ಮಿಸುವ ಕೆಲಸಕ್ಕೆ ಸಂಘ ಆದ್ಯತೆ ನೀಡಿದೆ. ಇದಕ್ಕೆ ಬೇಕಾದ ಶಿಕ್ಷಣ, ಸಂಸ್ಕಾರ, ಸ್ವತಃ ಮೇಲ್ಪಂಕ್ತಿ ನೀಡುವುದು ಸಂಘದ ವಿಶೇಷ. ಮತಾಂತರ, ಭಯೋತ್ಪಾದನೆ, ಭ್ರಷ್ಟಾಚಾರ ಮುಂತಾದ ಸಮಸ್ಯೆಗಳು ಎದುರಾಗಿವೆ. ಸಾಮಾನ್ಯ ವ್ಯಕ್ತಿಯೂ ಸಹ ಚಾರಿತ್ರ್ಯವಂತನಾದರೆ ನಂಬಿಕೆಗೆ ತಕ್ಕಂತೆ ಬದುಕಿದರೆ, ಯಾವ ಸಮಸ್ಯೆಗಳೂ ಉಳಿಯವು. ನಮ್ಮ ರಾಷ್ಟ್ರ ಮತ್ತೆ ಜಗತ್ತಿನ ಗುರುವಾದೀತು. ಅದಕ್ಕಾಗಿ ಸಂಘ ಕಾರ್ಯ ಇನ್ನಷ್ಟು ಬೆಳೆಯಬೇಕಿದೆ, ಅದಕ್ಕೆ ಎಲ್ಲರೂ ಬೆಂಬಲಿಸಿ ಎಂದು ಅವರು ಕರೆ ನೀಡಿದರು.

ಕರ್ನಾಟಕ ದಕ್ಷಿಣದ 378 ಸ್ಥಾನದಿಂದ 645 ಯುವಕರು, ಸಮಗ್ರ ಕರ್ನಾಟಕದ ಆಯ್ದ 32 ಸ್ಥಾನಗಳಿಂದ ಬಂದ 33 ಗಣ್ಯರು 20 ದಿನಗಳ ಪ್ರಥಮ ವರ್ಷದ ಶಿಕ್ಷಣ ಪಡೆದರು. ಇದೇ ಸಂದರ್ಭದಲ್ಲಿ ಕರ್ನಾಟಕ ದಕ್ಷಿಣದ 142 ಸ್ಥಾನಗಳಿಂದ ಬಂದ 182 ಕಾಲೇಜು ವಿದ್ಯಾರ್ಥಿಗಳು, ಈ ಪೈಕಿ 33 ಅಧ್ಯಾಪಕರು ಇಲ್ಲಿ ಒಂದು ವಾರದ ಶಿಕ್ಷಣ ಪಡೆದಿದ್ದಾರೆ.

ಈ ತರಬೇತಿ ಶಿಬಿರಕ್ಕೆ ಶತಾವಧಾನಿ ಡಾ. ರಾ.ಗಣೇಶ್, ಸಮಾಜ ಮುಖಿ ಚಿಂತನೆಯ ಸಂತ ಪೇಜಾವರ ಶ್ರೀಗಳು ಮುಂತಾದ ಗಣ್ಯರು ಭೇಟಿ ನೀಡಿದ್ದಾರೆ. ಮೇ 1ರ ಭಾನುವಾರ ಬೆಂಗಳೂರಿನ 175 ಕುಟುಂಬಗಳ ತಾಯಂದಿರು ತಾವೇ ಅಡುಗೆ ಮಾಡಿ ತಂದು ಮಾತೃ ಭೋಜನದ ಪ್ರೀತಿಯನ್ನು ಶಿಬಿರಾರ್ಥಿಗಳಿಗೆ ಉಣಬಡಿಸಿದ್ದಾರೆ.

ಸಹಜೀವನ ಸಾಮರಸ್ಯ ಮುಂತಾದ ಸದ್ಗುಣಗಳ ಶಿಕ್ಷಣವನ್ನು ನೀಡುವ ಈ ಶಿಬಿರ ಚೇತೋಹಾರಿಯಾಗಿತ್ತು. ರೈತರು, ಕಾರ್ಮಿಕರು, ವಿದ್ಯಾರ್ಥಿಗಳು, ವಕೀಲರು, ವೈದ್ಯರು ಮುಂತಾದ ಸಮಾಜದ ಎಲ್ಲ ಕ್ಷೇತ್ರಗಳ ಶಿಬಿರಾರ್ಥಿಗಳು ಇಲ್ಲಿದ್ದುದು ವಿಶೇಷ.

ಶಿಬಿರಾರ್ಥಿಗಳಿಂದ ಆಕರ್ಷಕ ಶಾರೀರಿಕ ಪ್ರದರ್ಶನ, ಭೋಗ ಮೆಟ್ಟಿ ತ್ಯಾಗ ಮೆರೆದ ಜನ್ಮ ಭೂಮಿ ಭಾರತ ... ಈ ಗೀತೆ ನೆರೆದವರ ಮನ ಸೂರೆಗೊಂಡಿತು.

## ಬಸವ ಭಂಡಾರ ಸ್ಥಾಪನೆಗೆ ವಾಟಾಳ್ ಆಗ್ರಹ

***ಬಸವ ಭಂಡಾರದಲ್ಲಿ ಬಸವಣ್ಣ ಸೇರಿದಂತೆ ಅವರ ಸಮಕಾಲೀನ ವಚನಕಾರರ ಸಮಗ್ರ ವಚನಗಳನ್ನು ವಿಶ್ವಕ್ಕೆ, ರಾಷ್ಟ್ರಕ್ಕೆ ಪರಿಚಯಿಸುವ ಕೆಲಸಕ್ಕೆ ಸರ್ಕಾರ ಮುಂದಾಗಬೇಕು***

**ಬೆಂಗಳೂರು:** ನಗರದ ಸುತ್ತಮುತ್ತ ಇರುವ ಒಂದು ಪ್ರಮುಖ ಸ್ಥಳದಲ್ಲಿ ಬಸವ ಭಂಡಾರ ನಿರ್ಮಿಸುವಂತೆ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಬಸವಣ್ಣನವರ ವಚನವನ್ನು ಆನೆಯ ಮೇಲಿಟ್ಟು ಮೆರವಣಿಗೆ ಮಾಡುವ ಮೂಲಕ ಬಸವ ಜಯಂತಿಯನ್ನು ಶುಕ್ರವಾರ ವಿಶಿಷ್ಟ ರೀತಿಯಲ್ಲಿ ಆಚರಿಸಿದ ವಾಟಾಳ್, ಬಸವ ಭಂಡಾರದಲ್ಲಿ ಬಸವಣ್ಣ ಸೇರಿದಂತೆ ಅವರ ಸಮಕಾಲೀನ ವಚನಕಾರರ ಸಮಗ್ರ ವಚನಗಳನ್ನು ವಿಶ್ವಕ್ಕೆ, ರಾಷ್ಟ್ರಕ್ಕೆ ಪರಿಚಯಿಸುವ ಕೆಲಸಕ್ಕೆ ಸರ್ಕಾರ ಮುಂದಾಗುವಂತೆ ಆಗ್ರಹಿಸಿದರು.

ಕಾಯಕವೇ ಕೈಲಾಸ ಎಂಬುದು ಬಸವಣ್ಣ ವಿಶ್ವಕ್ಕೆ ಸಾರಿರುವ ಸಂದೇಶ. ಬಸವಣ್ಣನ ವಚನಗಳಿಗೆ ಬದ್ಧರಾಗಿರದೆ ಬಸವ ಜಯಂತಿ ಆಚರಿಸಿದರೆ ಅದಕ್ಕೆ ಅರ್ಥವಿಲ್ಲ ಎಂದ ಅವರು, ಸ್ಥಾಪನೆಯಾಗಲಿರುವ ಭಂಡಾರವು ಅನುಭವ ಮಂಟಪವನ್ನೂ ಹೊಂದಿರಬೇಕು. ಅದರಲ್ಲಿ ದೇವರ ದಾಸಿಮಯ್ಯ, ಅಲ್ಲಮ ಪ್ರಭು, ಅಕ್ಕಮಹಾದೇವಿ, ಚನ್ನಬಸವಣ್ಣ, ಸಿದ್ಧರಾಮಯ್ಯ, ಅಂಬಿಗರ ಚೌಡಯ್ಯ ಸೇರಿದಂತೆ ಇತರ ವಚನಕಾರರ ಕೃತಿ ಹಾಗೂ ಚಿತ್ರಣ ಇರುವಂತೆ ಕ್ರಮ ಕೈಗೊಳ್ಳಬೇಕು ಎಂದು ವಾಟಾಳ್ ನಾಗರಾಜ್ ತಿಳಿಸಿದರು.

ಬಸವಣ್ಣನವರ ವಚನಗಳನ್ನು ಆನೆಯ ಮೇಲಿಟ್ಟು ಮೈಸೂರು ಬ್ಯಾಂಕ್ ವೃತ್ತದಿಂದ ಹೊರಟ ಮೆರವಣಿಗೆಯು ಅವಿನ್ಯೂ ರಸ್ತೆ, ಚಿಕ್ಕಪೇಟೆ, ಬಳೆಪೇಟೆ ಮಾರ್ಗದಲ್ಲಿ ಸಂಚರಿಸಿ ಕೆಂಪೇಗೌಡ ಬಸ್ ನಿಲ್ದಾಣ ತಲುಪಿತು.

### ಪ್ರಾಣಿ ಬಳಕೆ ಹಿಂಸೆಯಲ್ಲ

ತಮ್ಮ ಕಾರ್ಯಕ್ರಮಗಳಲ್ಲಿ ಪ್ರಾಣಿಗಳನ್ನು ಬಳಸಿಕೊಳ್ಳುತ್ತಿರುವುದನ್ನು ಸಮರ್ಥಿಸಿಕೊಂಡ ವಾಟಾಳ್, ಬಳಕೆ ಪ್ರಾಣಿ ಹಿಂಸೆಯಲ್ಲ. ಅವುಗಳ ಬಗೆಗಿನ ಗೌರವದಿಂದ ಬಳಸಲಾಗುತ್ತಿದೆ. ಚುನಾವಣೆ ವೇಳೆ ತಾವು ಪ್ರಾಣಿ ಪೂಜೆ ಮಾಡಿದ್ದಾಗಿ ತಿಳಿಸಿದರಲ್ಲದೆ, ಕತ್ತೆಗಳಿಗೆ ಮದುವೆ ಮಾಡಿಸಿದ್ದು ತಮಗೆ ಪ್ರಾಣಿಗಳ ಬಗ್ಗೆ ಇರುವ ಗೌರವವನ್ನು ತೋರುತ್ತದೆ ಎಂದರು.



**ನಗರದಲ್ಲಿ ಬಸವಣ್ಣನವರ ವಚನವನ್ನು ಆನೆಯ ಮೇಲಿಟ್ಟು ಮೆರವಣಿಗೆ ಮಾಡುವ ಮೂಲಕ ಬಸವ ಜಯಂತಿಯನ್ನು ಶುಕ್ರವಾರ ವಿಶಿಷ್ಟ ರೀತಿಯಲ್ಲಿ ಆಚರಿಸಿದ ವಾಟಾಳ್ ನಾಗರಾಜ್.**

## ಅಕ್ರಮ ಆಸ್ತಿ ಮಾಡಿದವರು ಜೈಲಿಗೆ

**ಬೆಂಗಳೂರು:** ಅಕ್ರಮ ಆಸ್ತಿ ಮಾಡಿದವರೆಲ್ಲಾ ಶ್ರೀಘ್ರವೇ ಜೈಲಿಗೆ ಹೋಗಲಿದ್ದಾರೆ ಎಂದು ರಾಜ್ಯಪಾಲ ಎಚ್.ಆರ್.ಭಾರದ್ವಾಜ್ ಭವಿಷ್ಯ ನುಡಿದರು.

ಶುಕ್ರವಾರ ನಗರದಲ್ಲಿ ಖಾಸಗಿ ಹೊಟೇಲ್‌ನಲ್ಲಿ ನಡೆದ ನಾಗರಿಕ ವಿಶೇಷ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ನಿರೀಕ್ಷೆಗೂ ಮೀರಿ ಇಂದು ಅಕ್ರಮ ಆಸ್ತಿಯನ್ನು ಕೆಲ ಮಂದಿ ಮಾಡಿದ್ದಾರೆ. ಅಂತಹವರೆಲ್ಲಾ ಶೀಘ್ರವೇ ಜೈಲಿಗೆ ಹೋಗಲಿದ್ದಾರೆ ಎಂದರು.

ಜೀವಿಸಲು ಬೇಕಾಗುವಷ್ಟು ಹಣವನ್ನು ಮಾಡಬೇಕು. ಆದರೆ ದುರಾಸೆಯಿಂದ ಕೆಲವರು ಹಲವು ತಲೆಮಾರಿಗೆ ಬೇಕಾಗುವಷ್ಟು ಆಸ್ತಿಯನ್ನು ಮಾಡಿದ್ದಾರೆ. ಅಂತಹ ಮಂದಿಗೆ ಕೇಡುಗಾಲ ಬಂದೊದಗಲಿದೆ ಎಂದು ಅವರು ಹೇಳಿದರು.



### ಬದಲಾದ ಬೆಂಗಳೂರು

ಈ ಹಿಂದೆ ಇದ್ದಂತಹ ಬೆಂಗಳೂರಿಗೂ ಹಾಗೂ ಇಂದಿನ ಬೆಂಗಳೂರಿಗೂ ಬಹಳ ಬದಲಾಗಿದೆ ಎಂದು ರಾಜ್ಯಪಾಲ ಭಾರದ್ವಾಜ್ ಹೇಳಿದರು.

1977ರಲ್ಲಿ ಸಮೃದ್ಧ ವಾತಾವರಣ ಇದ್ದಂತ ನಾಡು ಆಗಿತ್ತು. ಆದರೆ, ಇಂದು ಅಕ್ರಮ-ಸಕ್ರಮಗಳಿಂದ ಕೂಡಿದ ಬೆಂಗಳೂರು ಆಗಿಬಿಟ್ಟಿದೆ. ಹಿಂದಿನ ವಾತಾವರಣವನ್ನೇ ಗಮನದಲ್ಲಿ ಇಟ್ಟುಕೊಂಡು ಪ್ರಧಾನಿ ತಮ್ಮನ್ನು ರಾಜ್ಯಪಾಲರನ್ನಾಗಿ ಕರ್ನಾಟಕಕ್ಕೆ ಕಳುಹಿಸಿದರು. ಆದರೆ, ಇಲ್ಲಿನ ವಾತಾವರಣ ನೋಡಿದರೆ ಬೇಸರ ತರಿಸುವಂತಿದೆ ಎಂದು ಅವರು ವಿಷಾದಿಸಿದರು.

ಬಯೋಕಾನ್ ಸಂಸ್ಥೆಯ ಅಧ್ಯಕ್ಷೆ ಕಿರಣ್ ಮಜೂಮ್‌ದಾರ್ ಷಾ ಮಾತನಾಡಿ, ಮೆಟ್ರೋ ರೈಲು ಯೋಜನೆ ಹಾಗೂ ಇನ್ನಿತರೆ ಅಭಿವೃದ್ಧಿ ಕಾರ್ಯದಿಂದಾಗಿ ಬೆಂಗಳೂರು ಹಾಳಾಗಿದೆ. ಈ ಹಿಂದಿನ ವಾತಾವರಣವನ್ನೇ ಉಳಿಸಿಕೊಳ್ಳಬೇಕಾದರೆ ಬೆಂಗಳೂರು ಅಬ್ರನ್ಸ್ ಆರ್ಟ್ಸ್ ಕಮಿಷನ್ ಕಾಯ್ದೆಯನ್ನು ಜಾರಿಗೆ ತರಬೇಕಿದೆ ಎಂದರು.

## ಚಿರತೆ ದಾಳಿ: ಇಬ್ಬರಿಗೆ ಗಾಯ

**ಕೆ.ಆರ್.ಪೇಟೆ:** ಬಾಳೆ ತೋಟದಿಂದ ಕೆಲಸ ಮುಗಿಸಿ ಗ್ರಾಮಕ್ಕೆ ತೆರಳುತ್ತಿದ್ದ ಇಬ್ಬರ ಮೇಲೆ ಚಿರತೆ ದಾಳಿ ಮಾಡಿದ ಪರಿಣಾಮ ಅವರು ತೀವ್ರಗಾಯಗೊಂಡು ಆಸ್ಪತ್ರೆಗೆ ದಾಖಲಾಗಿರುವ ಘಟನೆ ತಾಲೂಕಿನ ಕತ್ತರಘಟ್ಟದಲ್ಲಿ ಶುಕ್ರವಾರ ನಡೆದಿದೆ.

ಗ್ರಾಮದ ನಿವಾಸಿಗಳಾದ ಲೇಟ್ ಜವರೇಗೌಡ ಎಂಬವರ ಮಗ ರಾಮೇಗೌಡ(45) ಮತ್ತು ಈರೇಗೌಡ ಎಂಬವರ ಮಗ ಶಂಕರೇಗೌಡ (32) ಎಂಬುವವರೇ ಚಿರತೆ ದಾಳಿಗೆ ತುತ್ತಾಗಿ ಆಸ್ಪತ್ರೆ ಸೇರಿರುವವರು.

**ಘಟನೆ:** ತನ್ನ ಬಾಳೆ ತೋಟದಲ್ಲಿ ಕೆಲಸ ಮುಗಿಸಿ ಆಡುಗಳಿಗೆ ಮರದ ಸೊಪ್ಪನ್ನು ಸೆಣೆಯುವ ವೇಳೆ ಅಚಾನಕ್ಕಾಗಿ ಬಂದ ಚಿರತೆ ಅವನ ಎದೆಯ ಭಾಗ ಮತ್ತು ಕೈಗಳಿಗೆ ತೀವ್ರವಾಗಿ ದಾಳಿ ಮಾಡುತ್ತಿದ್ದ ವೇಳೆ ರಾಮೇಗೌಡನು ಕೂಗಾಡತೊಡಗಿದ್ದಾನೆ. ಅದನ್ನು ಕೇಳಿ ಶಂಕರೇಗೌಡ ಅಲ್ಲಿಗೆ ಹೋದ ವೇಳೆ ಚಿರತೆ ಅವನ ಮೇಲು ಎರಗಿ ಹೊಟ್ಟೆಯ ಭಾಗದಲ್ಲಿ ದಾಳಿ ನಡೆಸಿದೆ. ಈ ಇಬ್ಬರು ವ್ಯಕ್ತಿಗಳು ಅದೃಷ್ಟವಶಾತ್ ಚಿರತೆ ದಾಳಿಯಿಂದ ತಪ್ಪಿ ಸಿಕೊಂಡು ಗ್ರಾಮಕ್ಕೆ ತೆರಳಿದ್ದಾರೆ. ಅದನ್ನು ಕಂಡ ಸಾರ್ವಜನಿಕರು ತಕ್ಷಣ ಅವರನ್ನು ಕೆ.ಆರ್.ಪೇಟೆ ಸರ್ಕಾರಿ ಅಸ್ಪ ತ್ರೆಗೆ ದಾಖಲಿಸಿದ್ದಾರೆ.

ಊರಿನ ಪ್ರಮುಖರು ಈ ಬಗ್ಗೆ ಅರಣ್ಯ ಇಲಾಖೆಗೆ ತೆರಳಿ ಧಿಕಾರಿಗಳಿಗೆ ಮನವರಿಕೆ ಮಾಡಿದ್ದಾರೆ. ಈಗಲಾದರು ಅರಣ್ಯ ಇಲಾಖೆ ಅಧಿಕಾರಿಗಳು ಎಚ್ಚೆತ್ತುಕೊಂಡು ಚಿರತೆಯನ್ನು ಹಿಡಿದು ಮುಂದಾಗುವ ಅನಾಹುತಗಳನ್ನು ತಪ್ಪಿ ಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ಯಡಿಯೂರಪ್ಪ ಸಲಹೆ

# ಬಸವಣ್ಣರ ಮೌಲ್ಯಗಳ ಅನುಕರಣೆಯಾಗಲಿ

- ■ ಬಸವಣ್ಣ ಬೋಧಿಸಿದ ತತ್ವಗಳನ್ನು ಜೀವನದಲ್ಲಿ ಅಳವಡಿಸಿ ಕೊಂಡಾಗ ಬಸವ ಜಯಂತಿ ಆಚರಣೆಗೆ ನಿಜವಾದ ಅರ್ಥ
- ■ ಅನುಭವ ಮಂಟಪದ ಪರಿಕಲ್ಪನೆಯೇ ಇಂದಿನ ಸಂಸತ್‌ಗೆ ನಾಂದಿ
- ■ ನಮ್ಮ ಸರ್ಕಾರ ಧರ್ಮ, ಸಂಸ್ಕೃತಿಯ ಉಳಿವಿಗೆ ಪ್ರಾಮಾಣಿಕ ಪ್ರಯತ್ನ ನಡೆಸುತ್ತಿದೆ

**ಬೆಂಗಳೂರು:** ಬಸವಣ್ಣ ಪ್ರತಿಪಾದಿಸಿದ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಸಮೃದ್ಧ ಸಮಾಜ ನಿರ್ಮಾಣಕ್ಕೆ ಮುಂದಾಗುವಂತೆ ಮುಖ್ಯಮಂತ್ರಿ ಯಡಿಯೂರಪ್ಪ ಜನತೆಗೆ ಕರೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಶುಕ್ರವಾರ ನಗರದಲ್ಲಿ ಆಯೋಜಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ವಚನ ಸಾಹಿತ್ಯದ ಮೂಲಕ ಬಸವಣ್ಣ ಬೋಧಿಸಿದ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಬಸವ ಜಯಂತಿ ಆಚರಣೆಗೆ ನಿಜವಾದ ಅರ್ಥ ಬರುತ್ತದೆ ಎಂದು ಅವರು ಹೇಳಿದರು.

ಸ್ವಾಮಿ ವಿವೇಕಾನಂದರು ಹೇಳಿದಂತೆ ಪ್ರತಿಯೊಬ್ಬ ವ್ಯಕ್ತಿ ಕೂಡ ದೈವಾಂಶ ಸಂಭೂತರೇ. ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುತ್ತಾರೆಂಬಂತೆ ಸಾರ್ಥಕ ಜೀವನ ನಡೆಸಿದವರು ಬಸವಣ್ಣ. ಅನುಭವ ಮಂಟಪದ ಪರಿಕಲ್ಪನೆಯೇ ಇಂದಿನ ಸಂಸತ್‌ಗೆ ನಾಂದಿಯಾಯಿತು ಎಂದ ಅವರು ವ್ಯಾಖ್ಯಾನಿಸಿದರು.

ಇಂದಿನ ಸಮಾಜದಲ್ಲಿ ಜನತೆ ಜ್ವಲಂತ ಸಮಸ್ಯೆಗಳಿಗೆ ಸಿಲುಕುತ್ತಿರುವುದಕ್ಕೆ ಬಸವ ತತ್ವ ಅಳವಡಿಸಿಕೊಳ್ಳದಿರುವುದೇ ಕಾರಣ ಎಂದ ಯಡಿಯೂರಪ್ಪ, ಸಮಾಜದಲ್ಲಿ ಶಾಂತಿ, ಸೌಹಾರ್ದತೆ ಮೂಡಿಸುವ ಸಲುವಾಗಿಯೇ ತಮ್ಮ ಸರ್ಕಾರ ಇಂತಹ ಕಾರ್ಯಕ್ರಮಗಳಿಗೆ ವಿಶೇಷ ಒತ್ತು ನೀಡುತ್ತಿದೆ. ಜತೆಗೆ ಧರ್ಮ, ಸಂಸ್ಕೃತಿಯ ಉಳಿವಿಗೆ ಪ್ರಾಮಾಣಿಕ ಪ್ರಯತ್ನ ನಡೆಸುತ್ತಿದೆ ಎಂದರು.

### ಬಸವ ಅಧ್ಯಯನ ಪೀಠ ಸ್ಥಾಪನೆ

ಬಸವಣ್ಣನ ವಿಚಾರಧಾರೆಯನ್ನು ಇಂದಿನ ಸಮಾಜಕ್ಕೆ ತಲುಪಿಸುವ ಸಲುವಾಗಿ ಬೆಂಗಳೂರಿನಲ್ಲಿ 25 ಕೋಟಿ ರೂ. ವೆಚ್ಚದಲ್ಲಿ ಬಸವ ಅಧ್ಯಯನ ಪೀಠ ಸ್ಥಾಪಿಸಲಾಗುವುದು. ಹಿರಿಯರ ಜತೆ ಸಮಾಲೋಚಿಸಿ ಸದ್ಯದಲ್ಲೇ ಈ ಯೋಜನೆಗೆ ಅಂತಿಮ ರೂಪ ನೀಡುವುದಾಗಿ ಹೇಳಿದರಲ್ಲದೆ ಲಾಲ್‌ಬಾಗ್‌ನಲ್ಲಿ 25 ಕೋಟಿ ರೂ. ವೆಚ್ಚದಲ್ಲಿ ತಾಯಿ ಭುವನೇಶ್ವರಿಯ ಪುತ್ಥಳಿ ಸ್ಥಾಪಿಸುವುದಾಗಿ ಯಡಿಯೂರಪ್ಪ ಹೇಳಿದರು.

### ಜಾತೀಯತೆ ತೊಲಗಲಿ

ಅಧ್ಯಕ್ಷತೆ ವಹಿಸಿದ್ದ ಕವಿ ಡಾ.ಜಿ.ಎಸ್.ಸಿದ್ದಲಿಂಗಯ್ಯ ಮಾತನಾಡಿ, ಅಂತರ್ಜಾತಿ ವಿವಾಹವಾದವರಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ಕಲ್ಪಿಸಿದಾಗ ಜಾತೀಯತೆ ತೊಲಗಿ ನಾವೆಲ್ಲ ಹಿಂದೂಗಳು ಎಂಬ ಮನೋಭಾವ ಮೂಡಲಿದೆ ಎಂದು ಆಶಿಸಿದರು.

ಬಸವಣ್ಣನವರಿಗೆ ಕನ್ನಡ ಭಾಷೆಯ ಬಗ್ಗೆ ಅಪಾರ ಪ್ರೇಮವಿತ್ತು. ಹೀಗಾಗಿಯೇ ಸಂಸ್ಕೃತ ಒಂದೇ ದೇವ ಭಾಷೆಯಲ್ಲ, ಕನ್ನಡವೂ ದೇವ ಭಾಷೆ ಎಂದು ಸಾರಿದ್ದರು ಎಂಬುದನ್ನು ಸ್ಮರಿಸಿದ ಅವರು, ರಾಜ್ಯದ ಮುಂಗಡಪತ್ರ ಇತಿಹಾಸದಲ್ಲೇ ಶೋಷಿತ ವರ್ಗದ ಕಲ್ಯಾಣಕ್ಕೆ ಅಪಾರ ಅನುದಾನ ನೀಡುವ ಜತೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ 200 ಕೋಟಿ ರೂ. ಅನುದಾನ ನೀಡಿದ ಕೀರ್ತಿ ಮುಖ್ಯಮಂತ್ರಿ ಯಡಿಯೂರಪ್ಪ ಅವರಿಗೆ ಸಲ್ಲಬೇಕು ಎಂದು ಪ್ರಶಂಸಿಸಿದರು. ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಮನು ಬಳಿಗಾರ್ ಉಪಸ್ಥಿತರಿದ್ದರು.

ನಗರದ ವಿವಿಧ ಬಡಾವಣೆಗಳಲ್ಲಿ ಕಾಯಕಯೋಗಿ ಶ್ರೀ ಬಸವೇಶ್ವರರ ಜಯಂತಿ ಕಾರ್ಯಕ್ರಮ ವಿಜೃಂಭಣೆಯಿಂದ ಜರುಗಿತು.

## ಒಂದ್ ಸಾಲು

### ■ ಭ್ರಷ್ಟರಿಗೆ ಶಿಕ್ಷೆ ಏಕಿಲ್ಲ?

ಲೋಕಾಯುಕ್ತ ನ್ಯಾ. ಸಂತೋಷ ಹೆಗ್ಡೆ ಅವರು ಸಮಾಜದಲ್ಲಿನ ಭ್ರಷ್ಟರನ್ನು ಸಾಕ್ಷಿ ಸಮೇತ ಹಿಡಿದುಕೊಟ್ಟರೂ ಅಂತಹವರಿಗೆ ಸರ್ಕಾರ ಯಾವುದೇ ಕಠಿಣ ಕ್ರಮ ಕೈಗೊಳ್ಳದೆ ಪೋಷಿಸಲಾಗುತ್ತಿದೆ. ಇಂತಹ ರಾಜಕೀಯ ಪಕ್ಷಗಳು, ಸರ್ಕಾರಗಳು ಇರುವತನಕ ಭ್ರಷ್ಟಾಚಾರ ಅಸಾಧ್ಯ ಎಂದರು. ಇಂತಹವರನ್ನು ಶಿಕ್ಷಿಸಲು ನಾವೆಲ್ಲರೂ ಹೋರಾಟಡೋಣ. ಈ ಹೋರಾಟಕ್ಕೆ ಬರುವಾಗ ಸಾಯುವುದಕ್ಕೂ ಸಿದ್ದರಾಗಿ ಎಂದು ದೊರೆಸ್ವಾಮಿ ಹೇಳಿದರು.

ಎಚ್.ಎಸ್.ದೊರೆಸ್ವಾಮಿ ಅಭಿಮತ

# ಪ್ರಜಾಪ್ರಭುತ್ವ ಉಳಿಯಲು ಸಮಾಜ ಎಚ್ಚರ ವಹಿಸಲಿ

**ಬೆಂಗಳೂರು:** ಸಮಾಜ ಎಚ್ಚರದಿಂದ ಇದ್ದಲ್ಲಿ ಮಾತ್ರ ಪ್ರಜಾಪ್ರಭುತ್ವಕ್ಕೆ ಉಳಿಗಾಲ. ಎಚ್ಚರ ತಪ್ಪಿದ್ದಲ್ಲಿ ವಿನಾಶ ತಪ್ಪಿದ್ದಲ್ಲ ಎಂದು ಸ್ವಾತಂತ್ರ್ಯ ಹೋರಾಟಗಾರ ಎಚ್.ಎಸ್. ದೊರೆಸ್ವಾಮಿ ಎಚ್ಚರಿಕೆ ಸಂದೇಶವನ್ನು ರವಾನಿಸಿದ್ದಾರೆ.

ಶುಕ್ರವಾರ ನಗರದ ಸ್ವಾತಂತ್ರ್ಯ ಉದ್ಯಾನವನದಲ್ಲಿ ಅಖಿಲ ಭಾರತ ಸ್ವಾತಂತ್ರ್ಯ ಹೋರಾಟಗಾರರ ಸಮಿತಿ ಕರ್ನಾಟಕ ಶಾಖೆ ಆಯೋಜಿಸಿದ್ದ ಜನಲೋಕಪಾಲ್ ವಿಧೇಯಕ ಆಗ್ರಹದ ರೂವಾರಿ ಹಾಗೂ ಗಾಂಧಿವಾದಿ ಅಣ್ಣಾ ಹಜಾರೆ ಅವರಿಗೆ ಸ್ವಾತಂತ್ರ್ಯ ಹೋರಾಟಗಾರರ ಬೆಂಬಲ ನೀಡುವ ಹೋರಾಟಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಕಳೆದ ಆರು ದಶಕಗಳಿಂದಲೂ ಯಾವುದೋ ಭ್ರಮೆಯಲ್ಲೇ ಕಾಲ ವ್ಯರ್ಥ ಮಾಡಿದ್ದೇವೆ. ಇನ್ನೂ ಮುಂದೆ ಹೀಗೆಯೇ ಕೈಕಟ್ಟಿ ಕೂರುವಂತಿಲ್ಲ. ಒಂದು ವೇಳೆ ಅದೇ ಭ್ರಮೆಯಲ್ಲಿದ್ದರೆ ರಾಷ್ಟ್ರವು ಅಧೋಗತಿಯತ್ತೆ ನಡೆದರೂ ಅನುಮಾನವೇ ಇಲ್ಲ ಎಂದರು.

ಸಣ್ಣ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆದಾಗಲೇ ತಕ್ಷಣ ಸೊಲ್ಲು ಎತ್ತಿ ಪ್ರತಿಭಟಿಸಿ. ಹೋರಾಟ ತೀವ್ರಗೊಂಡಾಗ ಎಲ್ಲರೂ ಒಟ್ಟಿಗೆ ಪಾಲ್ಗೊಳ್ಳೋಣ. ಅಲ್ಲಿಯತನಕ ಇರುವ ಸ್ಥಳದಿಂದಲೇ ಭ್ರಷ್ಟಾಚಾರದ ವಿರುದ್ಧ ಸಿಡಿದೇಳಿ ಎಂದು ದೊರೆಸ್ವಾಮಿ ಸ್ವಾತಂತ್ರ್ಯ ಹೋರಾಟಗಾರರಿಗೆ ಮನವಿ ಮಾಡಿದರು.

### ಮತದಾರರ ಸಂಕಷ್ಟಕ್ಕಿಲ್ಲ ಸ್ಪಂದನೆ

ರಾಷ್ಟ್ರದ ಎಲ್ಲಾ ರಾಜಕೀಯ ಪಕ್ಷಗಳಿಂದಲೇ ಇಂದು ರಾಷ್ಟ್ರ ಅಧಃಪತನಕ್ಕೆ ತಲುಪಿದೆ. ಹಾಗಾಗಿ ಯಾವ ಪಕ್ಷದವರನ್ನೂ ನಂಬುವಂತಿಲ್ಲ. ಭ್ರಷ್ಟಾಚಾರ ನಿರ್ಮೂಲನೆ ಬಗ್ಗೆ ಜನರ ಒಳದನಿಯಲಿದ್ದ ಅಂಶವನ್ನು ಅಣ್ಣಾ ರಾಷ್ಟ್ರಕ್ಕೆ ಬಿತ್ತರಿಸಿದ್ದು, ಅದನ್ನೇ ಅಸ್ತ್ರವನ್ನಾಗಿಸಿ ಭ್ರಷ್ಟಾಚಾರ ತೊಲಗಿಸಲು ಜನತೆ ಮುಂದಾಗಬೇಕು. ದೇಶದಲ್ಲಿ ಇನ್ನೂ ಶೇ.30ರಷ್ಟು ಬಡತನವಿದ್ದು, ಅಧಿಕಾರ ಏರಲು ಓಟು ಹಾಕುವ ಮಂದಿಯ ಸಮಸ್ಯೆ ಪರಿಹರಿಸಲು ರಾಜಕೀಯ ಪಕ್ಷಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ದೊರೆಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ಅಖಿಲ ಭಾರತ ಸ್ವಾತಂತ್ರ್ಯ ಹೋರಾಟಗಾರರ ಸಮಿತಿ ಅಧ್ಯಕ್ಷ ಡಿ.ಎನ್.ಸಂಪತ್, ಉಪಾಧ್ಯಕ್ಷ ಡಿ.ಪಂಪಣ್ಣ, ಪ್ರಧಾನ ಕಾರ್ಯದರ್ಶಿ ಎನ್. ಆರ್.ಮಠದ, ಎಬಿವಿಪಿ ದಕ್ಷಿಣ ಭಾರತ ಸಂಘಟನಾ ಕಾರ್ಯದರ್ಶಿ ಎನ್. ರವಿಕುಮಾರ್ ಹಾಗೂ ಇತರು ಪಾಲ್ಗೊಂಡಿದ್ದರು.

- ■ ಕಳೆದ ಆರು ದಶಕಗಳಿಂದಲೂ ಯಾವುದೋ ಭ್ರಮೆಯಲ್ಲೇ ಕಾಲ ವ್ಯರ್ಥ
- ■ ಅದೇ ಭ್ರಮೆಯಲ್ಲಿದ್ದರೆ ರಾಷ್ಟ್ರವು ಅಧೋಗತಿಯತ್ತ ನಡೆದರೂ ಅನುಮಾನವೇ ಇಲ್ಲ
- ■ ಸಣ್ಣ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆದಾಗಲೇ ತಕ್ಷಣ ಸೊಲ್ಲು ಎತ್ತಿ
- ■ ಇರುವ ಸ್ಥಳದಿಂದಲೇ ಭ್ರಷ್ಟಾಚಾರದ ವಿರುದ್ಧ ಸಿಡಿದೇಳಿ



**ನಗರದ ಫ್ರೀಡಂ ಪಾರ್ಕ್‌ನಲ್ಲಿ ಶುಕ್ರವಾರ ಭ್ರಷ್ಟಾಚಾರ ವಿರೋಧಿ ಜನಾಂದೋಲನ ಕಾರ್ಯಕ್ರಮ ಮುನ್ನ ಮಾಜಿ ಪ್ರಧಾನಿ ದೇವೇಗೌಡರಿಗೆ ಸ್ವಾತಂತ್ರ್ಯ ಹೋರಾಟಗಾರ ಎಚ್. ಎಸ್. ದೊರೆಸ್ವಾಮಿ ಆಶೀರ್ವದಿಸಿದರು.**

### ತಿದ್ದುಪಡಿ

ಮೇ 6ರ ಸಂಚಿಕೆಯ ಕೊನೆಯ ಪುಟದಲ್ಲಿ ಪ್ರಕಟವಾಗಿರುವ ಸಂಘ ಶಿಕ್ಷಾ ವರ್ಗ ಸಮಾರೋಪ ಕುರಿತ ಜಾಹೀರಾತಿನಲ್ಲಿ **'ರಾಷ್ಟ್ರೀಯ ಸ್ವಯಂಸೇವಕ ಸಂಘ, ಕರ್ನಾಟಕ ದಕ್ಷಿಣ'** ಎಂದಿರಬೇಕಾಗಿದ್ದು ಅದು **'ರಾಷ್ಟ್ರೀಯ ಸ್ವಯಂಸೇವಕ ಸಂಘ, ಕರ್ನಾಟಕ ಸರ್ಕಾರ'** ಎಂದು ತಪ್ಪಾಗಿ ಪ್ರಕಟವಾಗಿದೆ. ಕಣ್ತಪ್ಪಿನಿಂದ ಉಂಟಾದ ಈ ಪ್ರಮಾದಕ್ಕೆ ವಿಷಾದಿಸಲಾಗಿದೆ.

–ಸಂ